**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃಗೋಕಾಕ**

**ಸಿ.ಸಿ ನಂ. 1148/2011**
**ದಿಃ 05-01-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.**

ಚಾ.ಸಾ-40 ಪ್ರಾ.ಸಾ-17

| | | |
|---|---|---|
| ಹೆಸರು | : | ನಿಜನಿಂಗಪ್ಪ ಈಶ್ವರಪ್ಪ ಗೋಟಡಕಿ |
| ತಂದೆ ಹೆಸರು | : | ಈಶ್ವರಪ್ಪ ಗೋಟಡಕಿ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಮಸಗುಪ್ಪಿ |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-1 ರವರ ಪರಿಚಯವಿರುವುದಿಲ್ಲ. ಚಾಸಾ-10 ರಿಂದ 39 ರವರ ಪರಿಚಯವಿರುವುದಿಲ್ಲ.

ಮೃತ ಶಿವಾನಂದ ಶಂಕ್ರೆಪ್ಪ ಗೋಟಡಕಿ ಇವರು ಸುಮಾರು 11 ವರ್ಷಗಳ ಹಿಂದೆ ಅಪಘಾದಲ್ಲಿ ಮೃತಪಟ್ಟಿರುತ್ತಾರೆ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತ ಹೇಗೆ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಅಪಘಾತ ಪಡಿಸಿದ ವಾಹನವನ್ನು ಯಾರು ಚಲಾಯಿಸುತ್ತಿರುವರೆಂದು ನನಗೆ ಗೊತ್ತಿರುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಪೋಲಿಸರು ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿದಾರರನ್ನಾಗಿ ಪರಿಗಣಿಸಲು ಮಾನ್ಯ ಸ.ಸ.ಅ. ಅವರು ಅನುಮತಿ ಕೋರಿದ್ದು, ಪರಿಶೀಲಿಸಿ ನೋಡಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸ.ಸ.ಅ. ಅವರಿಂದಃ**

ದಿಃ 24-03-2011 ರಂದು ನಾನು ಪೋಲಿಸರ ಮುಂದೆ ನೀಡಿದ ನನ್ನ ಹೇಳಿಕೆಯಲ್ಲಿ ಈಗ ಓದಿ ಹೇಳಿದ ನಿಪಿ-30 ರ ಅಂಶಗಳಂತೆ ನನ್ನ ಹೇಳಿಕೆಯನ್ನು ಪೋಲಿಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರಿಗೆ ಮೇಲೆ ಹೇಳಿದಂತೆ ನಾನು ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಎಲ್ಲಾ ಗೊತ್ತಿದ್ದರೂ ಸಹ ಆರೋಪಿಗೆ

ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-30 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**<u>ಮರು ವಿಚಾರಣೆಃ</u>** --ಇಲ್ಲಾ--

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ

(ಶ್ರೀಮತಿ. ಸೂರ್ಯ ಪ್ರಭಾ ಎಚ್.ಡಿ)
ಹೆ.ದಿ.&ನ್ಯಾದಂ.,ಗೋಕಾಕ.